ಕೂರಿಸಿದ್ದಾರೋ ಏನೋ ಮಾಡಬಾರದ ಪಾಪವನ್ನೆಲ್ಲಾ ನನ್ನ ಕೈಲಿ ಮಾಡಿಸುತ್ತಿದೆ ಎಂದು ನಿನ್ನ ಕಾಕನನ್ನು ತಿವಿದೆ. ನಿನ್ನ ಕಾಕಾ ಒಂದು ತುತ್ತು ಊಟವನ್ನೂ ಮಾಡದೆ ಸತ್ತ ಮಂಗವನ್ನು ತೋಟದಾಚೆ ಹುಗಿದು ಸಣ್ಣ ಕಟ್ಟೆ ಕಟ್ಟಿ ದೀಪವಿಟ್ಟು ಹೋದವನು ಮರಳಿ ಬರಲೇ ಇಲ್ಲ ನೋಡು ಕಮಲಿ. ನಿನ್ನ ಕಾಕಾ ತುಂಬಾ ಕಟುಕ' ಎಂದು ಮತ್ತೂ ನೊಂದುಕೊಂಡಳು.

'ಆದದ್ದೆಲ್ಲಾ ಆಯಿತು ಚಿಕ್ಕಿ, ನಿನ್ನದೇನೂ ತಪ್ಪಿಲ್ಲ, ನೀನೂ ಯಾವುದೋ ಆತಂಕದಲ್ಲಿದ್ದೆ ಬಿಡು. ಗಂಡನ ಮೇಲೆ ಎಗರಾಡದವರು ಯಾರಾದರೂ ಇದ್ದಿರಬಹುದಾ ಹೇಳು' ಎಂದು ಜಗದೀಶನನ್ನು ಬಯ್ಯದ ದಿನಗಳಿದ್ದೀತೆ ಎಂದು ಲೆಕ್ಕಾಚಾರದಲ್ಲಿ ತೊಡಗಿದೆ.

'ಇಲ್ಲ ಕಮಲಿ, ನನ್ನ ಸಂಸಾರ ಎಲ್ಲರಂತಿರಲಿಲ್ಲ. ಮನೆ ಅಳಿಯನಾಗಿ ಬಂದ ನಿನ್ನ ಕಾಕನ ಸ್ವಾಭಿಮಾನಕ್ಕೆ ಪೆಟ್ಟಾಗುವಂತೆ ನಾನು ನಡೆದುಕೊಂಡೆನೇ ಎಂಬ ಸಂದೇಹ! ನಿನ್ನ ಕಾಕಾನಿಗೆ ಈ ಮನೆ ಅವನದ್ದೇ ಮನೆ ಎನ್ನಿಸುವಂತೆ ನಾನು ನಡೆದುಕೊಂಡಿದ್ದರೆ ಹೀಗಾಗುತ್ತಿರಲಿಲ್ಲವೇನೋ. ಅವನ ತಂದೆ ಮಾಡಿದ ಸಾಲ ತೀರಿಸಿ ನಾವು ದೊಡ್ಡವರಾಗಿದ್ದು ಹೌದು, ಆದರೆ ದೊಡ್ಡಸ್ತಿಕೆಯನ್ನು ನಿನ್ನ ಕಾಕನ ಮೇಲೆ ನಾನು ಚಲಾಯಿಸಿಬಿಟ್ಟೆನೆಂದು ಈಗನ್ನಿಸುತ್ತಿದೆ. ಹಾಂ... ನಿನ್ನ ಕಾಕಾ ಮಂಗನನ್ನು ಹೂತು ಕಟ್ಟೆ ಕಟ್ಟಿದ್ದನಲ್ಲ, ಆ ಕಟ್ಟೆಯನ್ನು ಅದ್ಯಾರು ಕಂಡಿದ್ದರೋ ಕಾಣೆ. ಪ್ರತಿದಿನ ಹೂವುಗೀವನ್ನಿಟ್ಟು ಪೂಜಿಸುತ್ತಿದ್ದವರು ನಂತರದ ದಿನಗಳಲ್ಲಿ ಅಲ್ಲಿ ಒಂದು ಪುಟ್ಟ ಮಾರುತಿ ಗುಡಿಯನ್ನೇ ಕಟ್ಟಿಬಿಟ್ಟರು. ಜನರ ಕಷ್ಟ ಎಷ್ಟಿದೆಯೆಂದರೆ ಎಷ್ಟೇ ಗುಡಿ ಕಟ್ಟಿ ಕೈಮುಗಿದರೂ ಬೇಡಿ ಮುಗಿಯಲಾರದಷ್ಟು ಕೋರಿಕೆಗಳಿರುತ್ತವೆ ಅವರಿಗೆ! ಪ್ರತೀದಿನವೂ ಅಡುಗೆಯ ಮಾದೇವಿ ಬೇಡವೆಂದರೂ ಮಾರುತಿ ಗುಡಿಯ ಪ್ರಸಾದ ತಂದುಕೊಡುತ್ತಿದ್ದಳು. ಪ್ರಸಾದ ಕಂಡರೆ ಮನುಷ್ಯತ್ವವನ್ನು ಮರೆದೆನೆಂದು ತೋರ್ಪಡಿಸುವವನ ಹಾಗೆ ಮಂಗನನ್ನು ಹುಗಿದು ನನ್ನನ್ನು ಜೀವಂತ ಸಮಾಧಿ ಮಾಡಿಹೋದ ನಿನ್ನ ಕಾಕನ ನೆನಪಾಗಿ ಅಲವರಿಕೆಯೆನ್ನಿಸಿ ಮಾರುತಿ ಮಂದಿರದ ಪ್ರಸಾದವನ್ನು ಮುಟ್ಟಲೂ ಇಲ್ಲ. ಆದರೆ ತಿಂಗಳು ಕಳೆದು ವರ್ಷಗಳಾದ ಮೇಲೂ ನಿನ್ನ ಕಾಕಾ ಮರಳದಿದ್ದಾಗ ಯಾವ ಪ್ರಸಾದ ತಿಂದು ಯಾರನ್ನು ತೃಪ್ತಿಪಡಿಸಬೇಕಿದೆ ಎಂಬ ಹೇಕರಿಕೆಯಿಂದ ಪ್ರಸಾದವೆಂದರೆ ದೂರವೇ ಉಳಿದುಬಿಟ್ಟೆ.'

> 'ನಿನ್ನ ಸ್ವಾಭಿಮಾನ ನಿನ್ನದು ಮಾತ್ರವಲ್ಲ, ನನ್ನ ಜೀವನವನ್ನೂ ಬಲಿಪಡೆಯಿತು ಎಂದು ಹೇಳಲಿಕ್ಕಾದರೂ ಒಮ್ಮೆ ನಾನು ಸಾಯುವುದರೊಳಗೆ ನಿನ್ನ ಕಾಕಾನನ್ನು ಭೇಟಿಯಾಗಲೇಬೇಕು ಕಮಲಿ. ನೀ ಏನೇ ಮಾಡಿದರೂ ನನ್ನ ನಿರ್ಧಾರ ಬದಲಾಗುವುದಿಲ್ಲ' ಎಂದಳು ಚಿಕ್ಕಿ...

ಪ್ರಸಾದ ತಿನ್ನದಿರಲು ಇಂತಹ ಏನೇನೋ ಕಾರಣಗಳಿವೆ ಎಂದು ಹೀಗೆಲ್ಲಾ ಬಿಡಿಸಿ ಹೇಳಿರಲಿಲ್ಲ ಚಿಕ್ಕಿ. ಪಾತಿಚಿಕ್ಕಿ ಮನಸ್ಸು ಬಿಚ್ಚಿ ಇಷ್ಟೆಲ್ಲಾ ಮಾತನಾಡಿದರೆ ತಾನೆ! ಯಾವಾಗಲೂ ಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡುತ್ತಿರುತ್ತಾಳೆ.

ಹರಟೆಹೊಡೆಯುವ ಜಾಯಮಾನವೇ ಇಲ್ಲ ಚಿಕ್ಕಿಗೆ. ಮನಃಸ್ಫೂರ್ತಿ ನಗದೆ – ಅಳದೆ ಇಡೀ ಜೀವನವನ್ನೇ ಸವೆಸಬಹುದೆಂಬ ಸತ್ಯವನ್ನು ಚಿಕ್ಕಿಯನ್ನು ನೋಡಿದಮೇಲೆಯೇ ನಾನು ನಂಬಿದ್ದು.